ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ. ಅಧ್ಯಕ್ಷರೇ, ಯಾವ ಯಾವ ಊರಿನಲ್ಲಿ ಸ್ಮಶಾನವಿಲ್ಲವೆಂದು ನಾವು ಸರ್ವೆ ಮಾಡಿಲ್ಲ, ಎಲ್ಲೆಲ್ಲಿ ಬೇಡಿಕೆ ಬರುತ್ತದೆ ಅದನ್ನು ಪರಿಗಣಿಸುತ್ತಿದ್ದೇವೆ. ಸರ್ಕಾರಿ ಗೋಮಾಳವಿದ್ದರೆ ಅಲ್ಲಿಂದ ತೆಗೆಸಿ ಕೊಡುತ್ತಿದ್ದೇವೆ. ಪ್ರೈವೇಟ್ ಲ್ಯಾಂಡ್ ಎಕರೆಗೆ 25 ಸಾವಿರಕ್ಕೂ ಸಿಕ್ಕುವುದಿಲ್ಲವೆಂದು ಪುಟ್ಟಣ್ಣಯ್ಯನವರು ಹೇಳಿದರು. ಕೆಲವು ಕಡೆ ಸಿಗುವುದಿಲ್ಲ. ಅಂತಹ ಕಡೆ ಸ್ವಲ್ಪ ಜಾಸ್ತಿಯಾದರೂ ಚಿಂತೆಯಿಲ್ಲ, ನೀವು ಮಾರ್ಕೆಟ್ ವ್ಯಾಲ್ಯೂ ಕೊಟ್ಟಿದ್ದರೂ ಪರ್ಚೇಸ್ ಮಾಡಿ ಎಂದು ಜಿಲ್ಲಾಧಿಕಾರಿಗಳಿಗೆ ಸೂಚನೆ ಕೊಟ್ಟಿದ್ದೇವೆ. ಇನ್ನೊಂದು ಸಾರಿ ಬೇಡಿಕೆ ಬಂದರೆ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಸ್ಮಶಾನಕ್ಕೆ ಎಲ್ಲಾದರೂ ಬೇಡಿಕೆ ಬರುತ್ತದೆಯೇ? ಇದು ಉಂಟೇ ಎಲ್ಲಿ ಬೇಡಿಕೆ ಇರುತ್ತದೆ ಅಲ್ಲಿ ನಾವು ಸ್ಮಶಾನ ಕೊಡುತ್ತೇವೆ ಎಂದರೆ ಹೇಗೆ ಇದು ಬೇಡಿಕೆ ಎಂದು ಅಲ್ಲಿ, ಇದು ಅವಶ್ಯಕತೆ ಎಲ್ಲಾ ತಾಲ್ಲೂಕಿನ ಪ್ರತಿ ಹಳ್ಳಿಯಲ್ಲಿ ಅವಶ್ಯಕತೆ ಇದೆ.

ಶ್ರೀ ಆರ್.ಎಲ್. ಜಾಲಪ್ಪ : ಅವರಿಗೆ ಗೊತ್ತಿಲ್ಲ, ಕಳೆದ 3-4 ತಿಂಗಳಿಂದ ಈ ರೀತಿಯ. ಬೇಡಿಕೆ ಬಂದಿದೆ. ಸುಮಾರು 15,000 ಜನರನ್ನು ವಾರಸುದಾರರವ್ನಾಗಿ ಮಾಡಿದ್ದೇವೆ.

ಅಧ್ಯಕ್ಷರು : ಅವರು ಬೇಡಿಕೆ ಕೊಡುವುದಿಲ್ಲ, ಸತ್ತಿರುವವರ ವಾರಸುದಾರರ ಬೇಡಿಕೆ ಇದು. ಮುಂದೆ ಸಾಯುವವರಿಗೆಲ್ಲಾ ನಾವು ವಾರಸುದಾರರು, ನಾವು ಸತ್ತ ಮೇಲೆ ಹಿಂದಿರುವವರು ನಮಗೆ ವಾರಸುದಾರರು.

ತುಮಕೂರು ಬಸ್ ನಿಲ್ದಾಣದ ದುರಸ್ತಿ

471 - ಶ್ರೀ ಎನ್. ಶಿವಣ್ಣ (ತುಮಕೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ನಗರದಲ್ಲಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣವು ತುಂಬಾ ಅವ್ಯವಸ್ಥಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಆ) ದುಸ್ಥಿತಿಯಲ್ಲಿರುವ ಈ ಬಸ್ ನಿಲ್ದಾಣದ ದುರಸ್ಥಿ ಕಾರ್ಯವನ್ನು ಯಾವಾಗ ಮಾಡಲಾಗುವುದು.

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಬಸ್ ನಿಲ್ದಾಣವು ತುಂಬಾ ಅವ್ಯವಸ್ಥಿತವಾಗಿರುವುದಿಲ್ಲ, ಆದರೆ ಬಸ್ ನಿಲ್ದಾಣದ ಉತ್ತರ ಭಾಗದ ಒಳ ಆವರಣದಲ್ಲಿ ಕೆಲವು ಕಡೆ ಗುಂಡಿಗಳು ಉಂಟಾಗಿರುವುದು ಗಮನಕ್ಕೆ ಬಂದಿದೆ.

ಆ) ಶೀಘ್ರದಲ್ಲಿಯೇ ಆವರಣ ದುರಸ್ಥಿ ಕಾರ್ಯವನ್ನು ಕೈಗೊಳ್ಳಲಾಗುವುದು.

ಶ್ರೀ ಎಸ್. ಶಿವಣ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ಬೆಂಗಳೂರು ಬಿಟ್ಟರೆ ತುಮಕೂರು ಕರ್ನಾಟಕ ರಾಜ್ಯ ರಸ್ತೆ ಸಾರಿಗೆಯ ಕೇಂದ್ರಸ್ಥಾನವಾಗಿದೆ. ಅವರು ಮೊದಲನೆಯ ಪ್ರಶ್ನೆಗೆ ಹೇಳಿರತಕ್ಕಂತಹ ಉತ್ತರದಲ್ಲಿ ಬಸ್ ನಿಲ್ದಾಣದ ಉತ್ತರ ಭಾಗದ ಒಳ ಆವರಣದಲ್ಲಿ ಕೆಲವು ಕಡೆ ಗುಂಡಿಗಳು ಉಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದಾರೆ. ದುರಸ್ತಿ ಕಾರ್ಯ ಯಾವಾಗ ಮಾಡಲಾಗುವುದು ಎಂದು ಪ್ರಶ್ನೆ ಕೇಳಿದ್ದಕ್ಕೆ ಶೀಘ್ರದಲ್ಲಿಯೇ ಆವರಣವನ್ನು ದುರಸ್ತಿ ಮಾಡಲಾಗುವುದು ಎಂದು ಹೇಳಿದ್ದಾರೆ. ಈಗ ಬೇಸಿಗೆ

ಕಳಿಯುತ್ತಿದೆ. ಅಲ್ಲಿ ಡಾಂಬರು ಮತ್ತೊಂದು ಹಾಕಬೇಕಾಗಿದೆ. ಇವೆಲ್ಲವನ್ನೂ ಎಷ್ಟು ದಿವಸದಲ್ಲಿ ಹಾಕುತ್ತಾರೆಂದು ಮಾನ್ಯ ಮಂತ್ರಿಗಳನ್ನು ನಾನು ಕೇಳುತ್ತಿದ್ದೇನೆ.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಅಧ್ಯಕ್ಷರೆ, ಗುಂಡಿಗಳು ಉತ್ಪನ್ನವಾಗಲಿಕ್ಕೆ ಮುನಿಸಿಪಾಲಿಟಿಯವರ ಗಟಾರಗಳು ಏನು ಇವೆ ಅವಕ್ಕೆ ನೀರು ತುಂಬಿಕೊಂಡು ಅಲ್ಲಿ ನೀರು ನಿಂತು ಈ ನೀರು ಸರ್ಕುಲೇಟಾಗಿ ಇಲ್ಲಿ ಗುಂಡಿಗಳಾಗಿವೆ. ಈ ಗಟಾರವನ್ನು ಸರಿ ಮಾಡಿ ಎಂದು ಮುನಿಸಿಪಾಲಿಟಿಯವರಿಗೆ ಬರಿದಿದ್ದೇವೆ. ಅವರು ಮಾಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ಮಳೆಗಾಲ ಶುರುವಾಗುವುದಕ್ಕಿಂತ ಮುಂಚೆ ಈ ಗುಂಡಿಗಳನ್ನು ತುಂಬಿ ಸರಿ ಮಾಡುತ್ತೇವೆಂದು ಮುನಿಸಿಪಾಲಿಟಿಯವರು ಹೇಳಿದ್ದಾರೆ.

ಶ್ರೀ ಎಸ್. ಶಿವಣ್ಣ : ನಗರಸಭೆಗಳು ಯಾವ ರೀತಿ ಇದೆ ಎಂದು ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ. ರಸ್ತೆ ಸಾರಿಗೆ ನಿಗಮಕ್ಕೆ ಮತ್ತು ನಗರ ಸಭೆಗಳಿಗೆ ಇರತಕ್ಕಂತಹ ಸಂಬಂಧವನ್ನು ಅವರೇ ತಿಳಿದು ಕೊಳ್ಳಬೇಕು. ಯಾವಾಗ ಎಷ್ಟು ದಿವಸದ ಒಳಗೆ ಮಾಡುತ್ತಾರೆ ಎಂಬುದನ್ನು ತಾವು ಹೇಳಬೇಕು. ಏಕೆಂದರೆ ಪ್ರತಿ ದಿವಸ ಸಾವಿರಾರು ಬಸ್‌ಗಳು ಓಡಾಡುತ್ತವೆ, ಅಂಥಾದ್ದರಲ್ಲಿ ಜನಗಳು ಯಾವ ರೀತಿ ಓಡಾಡಬೇಕು ಎಂಬುದನ್ನು ತಮ್ಮನ್ನು ಕೇಳುತ್ತೇನೆ.

ಶ್ರೀ ಕೆ.ಎಸ್. ಬೀಳಗಿ : ಆದಷ್ಟು ಬೇಗನೆ ಅಂದರೆ ಮಳೆಗಾಲ ಶುರುವಾಗುವುದಕ್ಕೆ ಪೂರ್ವದಲ್ಲಿ ಅಲ್ಲಿನ ಗುಂಡಿಗಳನ್ನು ತುಂಬಿ ಒಳ್ಳೆಯ ಪರಿಸ್ಥಿತಿಗೆ ಆ ಬಸ್ ಸ್ಟ್ಯಾಂಡನ್ನು ತರುತ್ತೇವೆ.

ಅಂಕೋಲಕ್ಕೆ ಬಸ್ ಡಿಪೋ.

209 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಂಕೋಲದ ಬಸ್ ಡಿಪೋ ಪ್ರಾರಂಭಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಆ) ಇದ್ದರೆ ಈ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಮಂತ್ರಿಗಳು ಉತ್ತರವನ್ನು ಬಹಳ ಸೂಕ್ಷ್ಮವಾಗಿ ಒದಗಿಸಿದ್ದಾರೆ. ಅಂಕೋಲದಲ್ಲಿ ನಾವು ಬಸ್ ಡಿಪೋ ಮಾಡುವುದಿಲ್ಲವೆಂದು ಹೇಳಿದ್ದಾರೆ. ಯಾವ ಕಾರಣಕ್ಕಾಗಿ ಅಲ್ಲಿ ಬಸ್ ಡಿಪೋಮಾಡುವುದಿಲ್ಲ? ತಜ್ಞರಿಂದ ಸರ್ವೆ ಏನಾದರೂ ಮಾಡಿಸಿದ್ದೀರೋ ಅವರು ಏನಾದರೂ ಅಲ್ಲಿ ಡಿಪೋ ಬೇಡವೆಂದು ಹೇಳಿದ್ದಾರೆಯೇ ಅಥವಾ ಸರಕಾರದಲ್ಲಿ ಹಣ ಇಲ್ಲವೋ ಅಥವಾ ಪ್ರಯಾಣಿಕರು ಇದೇ ರೀತಿಯ ಕಷ್ಟವನ್ನು ಅನುಭವಿಸಲಿ ಎಂಬ ದಿಕ್ಕಿನಲ್ಲಿ ಸರ್ಕಾರ ಯೋಚನೆ ಮಾಡುತ್ತಿದೆಯೇ? ಯಾವ ಕಾರಣಕ್ಕೆ ಅಲ್ಲಿ ಬಸ್ ಡಿಪೋ ಮಾಡುವುದಿಲ್ಲವೆಂಬ ಸರಕಾರದ ನಿಲುವು ಇದೆ ಅದನ್ನು ತಿಳಿಸಬೇಕು.

ಶ್ರೀ ಕೆ.ಎಸ್. ಬೀಳಗಿ : ಅಂಕೋಲದಲ್ಲಿ ಸಧ್ಯದ ಪರಿಸ್ಥಿತಿಯಲ್ಲಿ ಬಸ್ ಡಿಪೋ ಮಾಡುವುದಕ್ಕೆ ಅವಕಾಶ ಇಲ್ಲ. ಏಕೆಂದರೆ ಮೊದಲನೆಯದು ಅಲ್ಲಿ ಜಾಗದ ಸಮಸ್ಯೆ ಇದೆ. ಜಾಗ ಸಿಕ್ಕ ಮೇಲೆ ಅಲ್ಲಿ ಹತ್ತಿರದಲ್ಲೆ ಕುಮಟ ಮತ್ತು ಕಾರವಾರದಿಂದ ಅಂಕೋಲಕ್ಕೆ ಬರತಕ್ಕಂತಹ ಸಾರಿಗೆ ವ್ಯವಸ್ಥೆಯ ಷೆಡ್ಯೂಲ್ಸ್ ಏನು ಇದೆ ಈ ಷೆಡ್ಯೂಲ್‌ಗಳು ಹೇಳಿಕೊಳ್ಳುವಂತಹ ಸಂಖ್ಯೆಯಲ್ಲಿ ಇಲ್ಲ. ಆದ್ದರಿಂದ ಸಧ್ಯಕ್ಕೆ ಅದರ ಅವಶ್ಯಕತೆ ಇಲ್ಲ. ಆದ್ದರಿಂದ ಅವಶ್ಯಕತೆ ಬಿದ್ದಾಗ ಮಾನ್ಯ ಸದಸ್ಯರು ಜಾಗದ